**ಕರ್ನಾಟಕ ಸರ್ಕಾರ**

ಸಂ.ಡಿಟಿಇ/02/ ಆರ್ಇಸಿ/2018-19

ನಿರ್ದೇಶಕರವರ ಕಛೇರಿ.
ತಾಂತ್ರಿಕಶಿಕ್ಷಣ ನಿರ್ದೇಶನಾಲಯ.
ಬೆಂಗಳೂರು-560 001.
ದಿನಾಂಕ: 30-06-2018.

-:: **ಜ್ಞಾಪನ** ::-

**ವಿಷಯ:-** 2018-19 ನೇ ಸಾಲಿಗೆ ಸಂಸ್ಥೆಯ ಖರ್ಚು-ವೆಚ್ಚ ಹಾಗು ಸ್ವೀಕೃತಿಯ ಮಾಹೆವಾರು ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಹಾಗು ನಿಗದಿತ ಅವಧಿಯೊಳಗೆ ಸಲ್ಲಿಸುವ ಬಗ್ಗೆ.

**ಉಲ್ಲೇಖ:-** ಸಂ: ಡಿಟಿಇ 02 ಆರ್ಇಸಿ 2017. ದಿ: 27-12-2017.

-00000000-

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಈಗಾಗಲೇ ಇಲಾಖೆಯು ಸುತ್ತೋಲೆಯೊಂದನ್ನು ಹೊರಡಿಸಿದ್ದು. ಸದರಿ ಉಲ್ಲೇಖಿತ ಸುತ್ತೋಲೆಯನ್ವಯ ಸಂಸ್ಥೆಯ ಪ್ರಾಂಶುಪಾಲರು ನಿಗದಿತ ಕಾಲಮಿತಿಯೊಳಗಾಗಿ ಸಂಸ್ಥೆಯ ಮಾಹೆವಾರು ಖರ್ಚು-ವೆಚ್ಚ ಹಾಗು ಸ್ವೀಕೃತಿಯ ಮಾಹಿತಿಯನ್ನು ಧೃಢಿಕರಿಸಿ ಸಾಫ್ಟ್ ಕಾಪಿ ಸಹಿತವಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದರೆ ಸದರಿ ಉಲ್ಲೇಖಿತ ಸುತ್ತೋಲೆಯ ಆದೇಶದನುಸಾರ ಸಂಸ್ಥೆಗಳಿಂದ ಯಾವುದೇ ಮಾಹಿತಿಯು ಇಲ್ಲಿಯವರೆಗೂ ನಿರ್ದೇಶನಾಲಯದಲ್ಲಿ ಸ್ವೀಕೃತವಾಗಿರುವುದಿಲ್ಲ. ಅದ್ದರಿಂದ ಸಂಸ್ಥೆಯ ಖರ್ಚು-ವೆಚ್ಚ ಹಾಗು ಸ್ವೀಕೃತಿಯ 2018-19ನೇ ಸಾಲಿನ(**ಎಪ್ರಿಲ್ ತಿಂಗಳಿನಿಂದ ಜೂನ್ ವರೆಗಿನ**) ಮಾಹೆವಾರು ಮಾಹಿತಿಯನ್ನು ಸದರಿ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಮಾದರಿ ನಮೂನೆಯಂತೆ ಸಿದ್ಧಪಡಿಸಿ ಧೃಢಿಕರಿಸಿ ಸಾಫ್ಟ್ ಕಾಪಿ ಸಹಿತ ತ್ವರಿತವಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ಇನ್ನು ಮುಂದೆ ಪ್ರತಿ ತಿಂಗಳು ಮಾದರಿ ನಮೂನೆಯಂತೆ ಸಿದ್ಧಪಡಿಸಿ ಧೃಢಿಕರಿಸಿ **ಸಾಫ್ಟ್ ಕಾಪಿ** ಸಹಿತ **ಪ್ರತಿ ತಿಂಗಳ 10ನೇ** ತಾರೀಖಿನೋಳಗೆ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿ. ತಪ್ಪಿದಲ್ಲಿ ಆಯಾ ಸಂಸ್ಥೆಯ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆಂದು ತಿಳಿಸಿದೆ.

**ಲೆಕ್ಕಾಧಿಕಾರಿಗಳು(ಬಿಲ್ಸ್)**

**ಇವರಿಗೆ:**

ಎಲ್ಲಾ ಸರ್ಕಾರಿ / ಇಂಜಿನಿಯರಿಂಗ್/ ಪಾಲಿಟೆಕ್ನಿಕ್/ ಕಿರಿಯ ತಾಂತ್ರಿಕಶಾಲೆಗಳ ಪ್ರಾಚಾರ್ಯರಿಗೆ.

ಪ್ರತಿ:

1.ಇ-ಆಡಳಿತ ವಿಭಾಗ, ತಾಂತ್ರಿಕ ನಿರ್ದೇಶನಾಲಯ ಬೆಂಗಳೂರು (ಇಲಾಖಾ ವೆಬ್ಸೈಟ್‌ನಲ್ಲಿ ಪ್ರಕಟಿಸಲು)
2.ಕಛೇರಿ ಪ್ರತಿ.